# ಅಗ್ನಿ ಶ್ರೀಧರ್ ರವರ ಎದೆಗಾರಿಕೆ: ವಿಮರ್ಶಾತ್ಮಕ ವಿಶ್ಲೇಷಣೆ

**ಶಿವರಾಜು ಎನ್.**
ಸಂಶೋಧನಾರ್ಥಿ
ಕುವೆಂಪು ಕನ್ನಡ ಅಧ್ಯಯನ ಕೇಂದ್ರ
ಕುಪ್ಪಳಿ, ತೀರ್ಥಹಳ್ಳಿ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

Article Link: https://aksharasurya.com/2024/04/shivaraju-n-10.php

DOI: https://doi.org/10.5281/zenodo.10938094

## ABSTRACT:

ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಪ್ರಕಟವಾದ ಅಸಲೀ ಕಥನಗಳ ಪೈಕಿ ಅಗ್ನಿ ಶ್ರೀಧರ್ ರವರ 'ಎದೆಗಾರಿಕೆ' ಕಾದಂಬರಿಗೆ ಮಹತ್ವದ ಸ್ಥಾನವಿದೆ. ಕಥೆಯೊಳಗಿರುವ ಪ್ರೇಮ ಕಥೆಯೂ ಓದುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಅಗ್ನಿ ಶ್ರೀಧರ್ ರವರು ಭೂಗತ ಜಗತ್ತಿನ ತಲ್ಲಣಗಳನ್ನು ವಿಭಿನ್ನ ಶೈಲಿಯಲ್ಲಿ ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಎದೆಗಾರಿಕೆ ಸೋನ ಎಂಬ ಮುಂಬೈನ ಸುಫಾರಿ ಕಿಲ್ಲರ್‌ನ ಬದುಕಿನ ತಲ್ಲಣಗಳನ್ನು ಕುರಿತು ಮಾತನಾಡುತ್ತದೆ. ಭಾರತದಂತಹ ದೇಶದಲ್ಲಿ ಉದ್ಯೋಗ ದೊರೆಯದ ಕೆಲ ನಿರುದ್ಯೋಗಿ ಯುವಕರು ಕಾರಣಾಂತರಗಳಿಂದ ಭೂಗತ ಜಗತ್ತನ್ನು ಪ್ರವೇಶಿಸುತ್ತಾರೆ.

ಪ್ರಸ್ತುತ ಕೃತಿಯು ಕೆಳ ಮಧ್ಯಮ ವರ್ಗದ ಜನತೆಯ ಬದುಕಿನ ತಲ್ಲಣಗಳನ್ನು ಕುರಿತು ಮಾತನಾಡುತ್ತದೆ. ಏಕೆಂದರೆ ಪ್ರಸ್ತುತ ಕಾದಂಬರಿಯ ಕಥಾನಾಯಕ, ಕಥಾನಾಯಕಿ ಇಬ್ಬರೂ ಸಹ ಕೆಳ ಮಧ್ಯಮ ವರ್ಗದವರೇ. ಅವರ ಜೀವನದಲ್ಲಿ ದಡ ಸೇರದಿರಲು ಅವರ ಬಡತನವೇ ಕಾರಣವಾಗಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಕಾದಂಬರಿಯ ಶೀರ್ಷಿಕೆಯ ಬಗ್ಗೆ ಒಂದೆರಡು ಮಾತುಗಳನ್ನಾಡಲೇಬೇಕು. ಕಥಾನಾಯಕ ಸೋನುವಿಗೆ ಸಾವು ಎದುರಾಗಿದ್ದರೂ ಆತ ಸಾವಿಗೆ ಅಂಜುವುದಿಲ್ಲ. ಸೋನು ತಪ್ಪಿಸಿಕೊಳ್ಳಲು ಶ್ರೀಧರ್ ರವರು ಹಲವಾರು ಬಾರಿ ಅವಕಾಶಗಳನ್ನು ಸೃಜನೆ ಮಾಡಿಕೊಟ್ಟರೂ ಸಹ ಸೋನು ತಪ್ಪಿಸಿಕೊಳ್ಳುವುದಿಲ್ಲ. ಆ ಕಾರಣದಿಂದ ಕೃತಿಗೆ ನೀಡಿರುವ ಎದೆಗಾರಿಕೆ ಎಂಬ ಶೀರ್ಷಿಕೆ ಅರ್ಥಪೂರ್ಣವಾಗಿದೆ.

## KEYWORDS:

ಭೂಗತ ಜಗತ್ತು, ಬಡತನ, ಪ್ರೀತಿ, ಕೊಲೆ, ಪರಿಸ್ಥಿತಿ, ಸುಪಾರಿ, ಆತಂಕ, ಸ್ನೇಹ, ವಿಶ್ವಾಸ.

**ಪೀಠಿಕೆ:**

ಮನುಷ್ಯ ಒಬ್ಬ ಸಮಸ್ಯಾತ್ಮಕ ಜೀವಿ ಆತ ಸಮಸ್ಯೆಗಳಿಲ್ಲದೇ ಬದುಕುವುದು ಸಾಧ್ಯವಿಲ್ಲ. ಮನುಷ್ಯ ಮೂಲತಃ ಕೆಟ್ಟವನೂ ಅಲ್ಲ, ಒಳ್ಳೆಯವನೂ ಅಲ್ಲ. ಸಮಯ, ಸಂದರ್ಭ ಆತನನ್ನು ಕೆಟ್ಟವನನ್ನಾಗಿಯೂ ಅಥವಾ ಒಳ್ಳೆಯವನನ್ನಾಗಿಯೂ ರೂಪಿಸುತ್ತದೆ. ಒಮ್ಮೆ ತಪ್ಪು ಮಾಡಿ ಶಿಕ್ಷೆ ಅನುಭವಿಸಿದವರನ್ನು ತಪ್ಪಿತಸ್ಥರೆಂದೇ ನೋಡುವ ಸಮಾಜದ ಆಲೋಚನಾ ಕ್ರಮದಿಂದ ಸಮಾಜದಲ್ಲಿ ತಪ್ಪಿತಸ್ಥರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ತಪ್ಪಿತಸ್ಥರನ್ನು ಜನ ನೋಡುವ ಆಲೋಚನಾ ಕ್ರಮ ಬದಲಾಗುವವರೆಗೂ ಸಮಾಜದಲ್ಲಿ ಬದಲಾವಣೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಪ್ರಸ್ತುತ ಕಾದಂಬರಿಯ ಕಥಾನಾಯಕ ಆಕಸ್ಮಿಕವಾಗಿ ಭೂಗತ ಜಗತ್ತನ್ನು ಪ್ರವೇಶಿಸುತ್ತಾನೆ. ಆತ ಭೂಗತ ಜಗತ್ತಿನಿಂದ ಹೊರಬರಲು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗುತ್ತವೆ.

ಎದೆಗಾರಿಕೆ ಕೃತಿಯಲ್ಲಿನ ಕಥಾನಾಯಕ ಸೋನ ಸಾಕಷ್ಟು ಕೊಲೆ ಮಾಡಿದ್ದರೂ ಆತನನ್ನು ಪಾಪ ಪ್ರಜ್ಞೆ ಕಾಡುತ್ತಿದೆ. ಬಿ.ಎ. ಪದವೀಧರನಾದರೂ ಉದ್ಯೋಗ ದೊರೆಯದ ಕಾರಣದಿಂದ ಮುಂಬೈಗೆ ವಲಸೆ ಹೋಗುತ್ತಾನೆ. ವಿಷಮ ಪರಿಸ್ಥಿತಿಯಲ್ಲಿ ಆತ ಅಪರಾಧ ಜಗತ್ತನ್ನು ಪ್ರವೇಶಿಸುತ್ತಾನೆ. ತಪ್ಪು ಮಾಡಿದ ಮನುಷ್ಯನಿಗೆ ಪಶ್ಚಾತ್ತಾಪವೇ ದೊಡ್ಡ ಶಿಕ್ಷೆ. ಈ ಕೃತಿಯ ಮುನ್ನುಡಿಯಲ್ಲಿ ಕೋಟಗಾನಹಳ್ಳಿ ರಾಮಯ್ಯ ಅವರು ದಾಸ್ತೋವಸ್ಕಿಯ ಕಥೆಯ ಉದಾಹರಣೆಯನ್ನು ಹೀಗೆ ವಿವರಿಸುತ್ತಾರೆ. "ಎಷ್ಟೇ ಸಮರ್ಥನೀಯ ಎನ್ನಿಸಿದರೂ ಯೋಜಿತ ಕೊಲೆಯ ಬಾಗಿಗೆ 'ಅಪರಾಧ ಪ್ರಜ್ಞೆಯಿಂದ' ಹೊರಬರುವ ಯಾವ ದಾರಿಯೂ ಇರಲಾರದು, ಪಶ್ಚಾತ್ತಾಪದ ಹೊರತಾಗಿ, ಇದಕ್ಕೆ ದಾಸ್ತೋವಸ್ಕಿಯ ಮಹೋನ್ನತ ಪಾತ್ರವಾದ ಕ್ರೈಮ್ ಅಂಡ್ ಪನಿಶ್‌ಮೆಂಟ್‌ನ ನಿಕೋಮ್ ಒಂದು ಉತ್ತಮ ಉದಾಹರಣೆ. ಬಹಳ ಪ್ರಾಮಾಣಿಕವಾಗಿ ಬದುಕಬೇಕೆಂಬ ಸಂಕಲ್ಪಶಾಲಿ, ಸೂಕ್ಷ್ಮ ಸಂವೇದಿ ರಾಸ್ಕೋಲ್‌ನಿಕೋವ್ ಹದಗೆಟ್ಟ ಸಾಮಾಜಿಕ ಪರಿಸ್ಥಿತಿಗೆ ರೋಸಿ ಹೋಗಿ ಎಲ್ಲ ಬಗೆಯಲ್ಲೂ ಕೊಲೆಗೀಡಾಗಲು ಸಮರ್ಥನೀಯ ಕಾರಣಗಳುಳ್ಳ ಗಿರವಿ ಅಂಗಡಿಯ ವೃದ್ದೆಯ ಕೊಲೆ ಯೋಜಿಸುತ್ತಾನೆ. ಕೊಲ್ಲುವ ವೇಳೆ ಅನಿರೀಕ್ಷಿತವಾಗಿ ಘಟನೆಯ ಸ್ಥಳಕ್ಕೆ ಬರುವ ಆಕೆಯ ತಾರುಣ್ಯದ ತಂಗಿಯನ್ನು ಕೊಲ್ಲುತ್ತಾನೆ. ಮುಂದೆ ಆತ ಪರಿತಪಿಸುವುದು ತರುಣಿಯ ಕೊಲೆಗಲ್ಲ, ವೃದ್ದೆಯ ಕೊಲೆಗೆ"[1]. ಆನಂತರದ ದಿನಗಳಲ್ಲಿ ನಿಕೋವ್ ಬಜು ಒಳ್ಳೆಯ ವ್ಯಕ್ತಿಯಾಗಿ ಬದುಕಲು ಪ್ರಯತ್ನಿಸಿದರೂ ಅದು ಸಾಧ್ಯವಾಗುವುದಿಲ್ಲ.

ಕಥಾನಾಯಕ ಸೋನುವನ್ನು ಕೊಲ್ಲುವ ಹೊಣೆಗಾರಿಕೆಯನ್ನು ಮುತ್ತಪ್ಪಣ್ಣನಿಗೆ ವಹಿಸಲಾಗಿರುತ್ತದೆ. ಬಚ್ಚನ್ ಹಾಗೂ ಶ್ರೀಧರ್ ಮುತ್ತಪ್ಪಣ್ಣ ತಂಡದಲ್ಲಿ ಸಹ ಸದಸ್ಯರಾಗಿರುತ್ತಾರೆ. ಆ ಸಂದರ್ಭದಲ್ಲಿ ಶ್ರೀಧರ್ ಮತ್ತು ಸೋನುವಿನ ನಡುವೆ ನಡೆಯುವ ಸಂಭಾಷಣೆಯೇ ಪ್ರಸ್ತುತ ಕಾದಂಬರಿಯ ಕಥಾ ವಸ್ತು. ಶ್ರೀಧರ್ ರವರು ಸೋನು ತಪ್ಪಿಸಿಕೊಳ್ಳಲು ಹಲವಾರು ಅವಕಾಶಗಳನ್ನು ಸೃಷ್ಟಿ ಮಾಡಿಕೊಟ್ಟರೂ ಸಹ ಸೋನು ನಿರಾಕರಿಸುತ್ತಾನೆ. ಅಂತಿಮವಾಗಿ ಸೋನು ಸಾಯುತ್ತಾನೆ. ಕೃತಿಯ ಶ್ರೇಷ್ಠತೆಯ ಬಗ್ಗೆ ಕೃತಿಗೆ ಮುನ್ನುಡಿ ಬರೆದಿರುವ ಕೋಟಗಾನಹಳ್ಳಿ ರಾಮಯ್ಯ ಅವರು ಹೇಳಿರುವ ಮಾತುಗಳು ಇಂತಿವೆ. "ಒಟ್ಟಾರೆ 'ಎದೆಗಾರಿಕೆ' ನನಗೆ ತಿಳಿದಂತೆ ಕನ್ನಡದಲ್ಲಿ ಬಂದಿರುವ ಒಂದು ಅಪರೂಪದ ಕೃತಿ. ಅಪರೂಪದ ಅಸಲೀ ಕಥನ ಮಾತ್ರವಾಗಿರದೆ ತನ್ನದೇ ಆದ ಪ್ರತ್ಯೇಕತೆ ಮತ್ತು ಸೊಗಸು ಇರುವ ಕೃತಿ. ಈ ಕೃತಿಯ ಬಗ್ಗೆ ಚಾಲ್ತಿ ಪೂರ್ವಗ್ರಹಗಳನ್ನು ಮೀರಿ ವಸ್ತುನಿಷ್ಠ ಚರ್ಚೆ ನಡೆದಲ್ಲಿ, ಇದಕ್ಕೆ ಸಲ್ಲಬೇಕಾಗಿರುವ ಸ್ಥಾನ ಸಂದಲ್ಲಿ ಹೆಚ್ಚು ಸಂತೋಷಿಸುವವರಲ್ಲಿ ನಾನು ಒಬ್ಬ"[2] ಭೂಗತ ಜಗತ್ತಿನ ನಾಡಿ ಮಿಡಿತವನ್ನು ಚೆನ್ನಾಗಿ ಅರಿತಿದ್ದ ಶ್ರೀಧರ್ ರವರು ಸೋನುವಿನ ಬಗ್ಗೆ ಏಕೆ ಎದೆಗಾರಿಕೆ ಕಾದಂಬರಿಯನ್ನು ಎಂಬ ವಿಷಯವನ್ನು ಮೊದಲು ಪರಿಶೀಲಿಸಬೇಕು. ಸೋನು ಸಾಕಷ್ಟು ಕೊಲೆಗಳನ್ನು ಮಾಡಿದರೂ ಸಾಯುವ ಸಂದರ್ಭದಲ್ಲಿ ಆತನನ್ನು ಪಾಪ ಪ್ರಜ್ಞೆ ಕಾಡುತ್ತದೆ. ತಾನು ಮಾಡಿದ ಪ್ರಮುಖ ಕೊಲೆಗಳ ಚಿತ್ರಣವನ್ನು ಶ್ರೀಧರ್ ರವರಿಗೆ ವಿವರಿಸುತ್ತಾನೆ. ಅದರಲ್ಲಿ ತನ್ನ ಬದುಕಿನಲ್ಲಿ ಮಾಡಿದ ಎರಡು ಕೊಲೆಗಳನ್ನು ಕುರಿತು ಮನಬಿಚ್ಚಿ ಮಾತನಾಡುತ್ತಾನೆ. ಮುದುಕಿಯೋರ್ವಳನ್ನು ಹಾಗೂ ತನ್ನ ಜೊತೆ ಇದ್ದ ಹುಡುಗನೊಬ್ಬನನ್ನು ಕೊಲೆ ಮಾಡಿದ್ದನ್ನು ನೆನೆದು ಅಳುತ್ತಾನೆ. ಅವರನ್ನು ಕೊಲೆ ಮಾಡಿದ ಪಾಪದಿಂದಲೇ ತನಗೆ ಈ ಸ್ಥಿತಿ ಬಂದಿದೆ ಎಂದು ಮರುಗುತ್ತಾನೆ. ಭಾರತೀಯ ಸಂಸ್ಕೃತಿಯಲ್ಲಿ ಶಿಶುಹತ್ಯೆ, ವೃದ್ದರ ಹತ್ಯೆ ಮಹಾಪಾಪ ಎಂಬ ನಂಬಿಕೆ ಇದೆ. ಆ ಕಾರಣದಿಂದಲೇ ವೃದ್ದೆಯ ಕೊಲೆಯಿಂದ ಸೋನು ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದಾನೆ.

ಪ್ರಸ್ತುತ ಸೋನುವಿನ ಪ್ರೇಮ ಪ್ರಕರಣವನ್ನು ಕುರಿತು ಚರ್ಚಿಸುವುದು ಈ ಲೇಖನ ರಚನೆಯ ಹಿಂದಿನ ಉದ್ದೇಶ. ಎದೆಗಾರಿಕೆಯನ್ನು ಸಿನಿಮಾ ಮಾಡುವಲ್ಲಿ ಸೋನುವಿನ ಪ್ರೇಮ ಪ್ರಕರಣ ಮಹತ್ತರ ಪರಿಣಾಮ ಬೀರಿದೆ. ಏಕೆಂದರೆ ಸಿನಿಮಾದ ನಿರ್ದೇಶಕಿ ಸುಮನಾ ಕಿತ್ತೂರು ರವರು ಪ್ರೇಮ ಪ್ರಕರಣವನ್ನು ಅನುಲಕ್ಷಿಸಿಯೇ ಚಿತ್ರಕಥೆಯನ್ನು ಹೆಣೆದಿದ್ದಾರೆ. ಕೃತಿಯ ಮೂಲ ಆಶಯಕ್ಕೆ ಧಕ್ಕೆ ಆಗದ ರೀತಿಯಲ್ಲಿ ಸಿನಿಮಾವನ್ನು ನಿರ್ದೇಶಿಸಿದ್ದಾರೆ.

ಎದೆಗಾರಿಕೆ ಕನ್ನಡದ ಶ್ರೇಷ್ಠ ಪ್ರೇಮ ಕಥೆಗಳಲ್ಲೊಂದು. ಸತ್ಯ ಘಟನೆ

ಎಂಬ ಕಾರಣದಿಂದ ಅದು ಶ್ರೇಷ್ಠವಾಗುವುದಿಲ್ಲ. ಅದರಲ್ಲಿ ಅಡಗಿರುವ ಸೂಕ್ಷ್ಮಾತಿ ಸೂಕ್ಷ್ಮ ಭಾವನೆಗಳಿಂದ ಅದು ಶ್ರೇಷ್ಠವಾಗುತ್ತದೆ. ರಶ್ಮಿ, ಸೋನ ಒಮ್ಮೆ ಬೀಚ್‌ನಲ್ಲಿ ಮಾತನಾಡುತ್ತಾ ಕುಳಿತಿದ್ದಾಗ ಪ್ರೀತಿಯ ಬಗ್ಗೆ ರಶ್ಮಿ ಹೇಳುವ ಮಾತುಗಳು ಮಾರ್ಮಿಕವಾಗಿವೆ. "ಕ್ರಿಮಿನಲ್‌ಗಳನ್ನು ಪ್ರೀತಿಸಿ, ಅವರನ್ನು ಸರಿದಾರಿಗೆ ತರೋದು ಒಂದು ರೀತಿಯಲ್ಲಿ ಮುಗ್ಧ ಮಗುವನ್ನು ತಿದ್ದಿ ಸರಿ ದಾರಿಗೆ ತಂದ ಹಾಗೆ ಅನ್ಸುತ್ತೆ".[3] ಈ ಕಥೆಯ ಶ್ರೇಷ್ಠತೆ ಅಡಗಿರುವುದು ಪ್ರೀತಿಯ ವಿಚಾರದಲ್ಲಿ ಕಥಾ ನಾಯಕ ನಾಯಕಿಗಿದ್ದ ಪ್ರಾಮಾಣಿಕತೆಯಿಂದ. ಏಕೆಂದರೆ ಸೋನು ಡಿಸ್ಕೋ ಒಂದರ ವ್ಯವಸ್ಥಾಪಕನಾಗಿರುತ್ತಾನೆ. ಡಿಸ್ಕೋನಲ್ಲಿ ಅವನಿಗೆ ತರಹದ ಹುಡುಗಿಯರ ಪರಿಚಯವಿರುತ್ತದೆ. ರಶ್ಮಿಯ ಮೇಲೆ ತನಗೆ ಪ್ರೀತಿಯಾದ ಬಗೆಯನ್ನು ಸೋನ ಹೀಗೆ ವಿವರಿಸುತ್ತಾನೆ. "ಡಿಗ್ರಿ ಓದುತ್ತಿದ್ದವಳು ರಶ್ಮಿ. ಅವಳ ಆರೇಳು ಗೆಳತಿಯರು ಡಿಸ್ಕೋಗೆ ಬರಲು ಶುರು ಮಾಡಿದರು. ಅವಳು ಮಾತ್ರ ಬರಲು ನಿರಾಕರಿಸಿದಳು. ಸಾಧಾರಣ ಆಕೆಯಲ್ಲಿ ಆಕರ್ಷಿತವಾಗಿದ್ದುದ್ದು ಅವಳ ಮುಖದಲ್ಲಿನ ಕಾಂತಿ ಮತ್ತು ಅವಳು ಕಣ್ಣುಗಳು"[4] ಸೋನು ನೋಡಿದ ಹುಡುಗಿಯರಿಗೆ ಹೋಲಿಕೆ ಮಾಡಿದರೆ ರಶ್ಮಿ ಅಂತಹ ರೂಪವತಿಯೇನೂ ಆಗಿರುವುದಿಲ್ಲ. ಅಂದರೆ ನಿಜವಾದ ಪ್ರೀತಿಗೂ, ಸೌಂದರ್ಯಕ್ಕೂ ಯಾವುದೇ ಸಂಬಂಧವಿಲ್ಲ. ಸೋನು ಆಕೆಯನ್ನು ಮನಸಾರೆ ಪ್ರೀತಿಸುತ್ತಾನೆ. ರಶ್ಮಿಯ ವಿಚಾರದಲ್ಲಿ ಆತ ಕನಸಿನಲ್ಲಿಯೂ ಯಾವ ಕೆಟ್ಟ ಭಾವನೆಯನ್ನು ಹೊಂದಿರಲಿಲ್ಲ.

ರಶ್ಮಿಯ ವ್ಯಕ್ತಿತ್ವದ ಬಗ್ಗೆ ಸೋನು ಹೇಳುವ ಮಾತುಗಳಲ್ಲೇ ಆಕೆ ಎಂತಹ ವ್ಯಕ್ತಿ ಎಂಬುದು ಗೊತ್ತಾಗುತ್ತದೆ. "ರಶ್ಮಿ ಅಂಥಾ ಇಂಥಾ ಹುಡುಗಿ ಅಲ್ಲ. ನಿಮಗೆ ಮೊದಲೇ ಹೇಳಿದ್ದೇನೆ. ಹುಡುಗಿಯರು ನನಗೆ ಧಾರಾಳವಾಗಿ ಸಿಗುತ್ತಿದ್ದರು ಅಂತ. ಅಂಥಾದ್ರಲ್ಲಿ ರಶ್ಮಿ ನನ್ನನ್ನು ಅಷ್ಟು ಆಕರ್ಷಿಸಬೇಕಾದರೆ ಅವಳ ವ್ಯಕ್ತಿತ್ವ ಎಂಥದ್ದು ಎಂದು ನೀವೆ ಅರ್ಥ ಮಾಡಿಕೊಳ್ಳಿ. ದುರ್ಬೀನು ಹಾಕಿ ಹುಡುಕಿದರೂ ಒಂದೇ ಒಂದು ಸಣ್ಣತನವಿರಲಿಲ್ಲ."[5] ರಶ್ಮಿಯ ಪ್ರೀತಿ ಏಕೆ? ಶ್ರೇಷ್ಠವಾಗುತ್ತದೆ ಎಂದರೆ, ಸೋನು ಭೂಗತ ಜಗತ್ತಿಗೆ ಸಂಪರ್ಕವಿರುವ ವ್ಯಕ್ತಿ ಎಂದು ತಿಳಿದಿದ್ದ ನಂತರವೂ ಸಹ ಆತನನ್ನು ಮನಸಾರೆ ಪ್ರೀತಿಸುತ್ತಾಳೆ. ಆತನನ್ನು ಸರಿ ದಾರಿಗೆ ತರಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾಳೆ. ಆ ಕಾರ್ಯದಲ್ಲಿ ಭಾಗಶಃ ಯಶಸ್ವಿಯೂ ಆಗಿರುತ್ತಾಳೆ. ಆದರೆ ಅನಿರೀಕ್ಷಿತವಾಗಿ ಸೋನು ಕಾಣೆಯಾಗಿದ್ದರೂ ಕೆಲ ದಿನಗಳ ನಂತರ ಆತ ಕೊಲೆಯಾದದ್ದು ಆಕೆಯನ್ನು ದುಃಖದ ಕಡಲಲ್ಲಿ ಮುಳುಗಿಸುತ್ತದೆ.

ಎದೆಗಾರಿಕೆ ಕಾದಂಬರಿಯ ಮತ್ತೊಂದು ವಿಶೇಷತೆ ಎಂದರೆ ಭಾಷೆಯ ವಿಚಾರ. ಸೋನು ಆರಂಭದಲ್ಲಿ ರಶ್ಮಿಯ ಪರಿಚಯಕ್ಕಾಗಿ ಹಾತೊರೆಯುವುದಿಲ್ಲ.

ಆದರೆ ಅವಳು ಕನ್ನಡದವಳು ಎಂದು ತಿಳಿದ ನಂತರ ಆಕೆಯ ಸ್ನೇಹಕ್ಕಾಗಿ ಹಾತೊರೆಯುತ್ತಾನೆ. ಅಂದರೆ ಕೃತಿಯು ಪರರಾಜ್ಯದಲ್ಲಿರುವ, ಪರದೇಶಗಳಲ್ಲಿರುವ ಕನ್ನಡಿಗರ ಸ್ಥಿತಿಗತಿಗಳನ್ನು ಕುರಿತು ಸಹ ಮಾತನಾಡುತ್ತದೆ. ಸೋನು ಬಾಂಬೆ ನಗರವನ್ನು ಪ್ರವೇಶಿಸಿದ ಸಂದರ್ಭದಲ್ಲಿ ಆತನಿಗೆ ಭಾಷೆಯ ವಿಚಾರದಲ್ಲಿ ಅನೇಕ ತೊಂದರೆಗಳು ಎದುರಾಗುತ್ತವೆ. ಆನಂತರದ ದಿನಗಳಲ್ಲಿ ಹಿಂದಿ ಹಾಗೂ ಮರಾಠಿ ಭಾಷೆಯನ್ನು ಅನಿವಾರ್ಯವಾಗಿ ಕಲಿಯುತ್ತಾನೆ.

ಕೃತಿಗೆ ಬೆನ್ನುಡಿ ಬರೆದಿರುವ ಬಂಜಗೆರೆ ಜಯಪ್ರಕಾಶ್ ರವರು ಕೃತಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. "ಭೂಗತ ಜಗತ್ತನ್ನು ಕುರಿತ ಬರಹಗಳಲ್ಲಿ ಸಾಮಾನ್ಯವಾಗಿ ಕ್ರೌರ್ಯದ ವಿಜೃಂಭಣೆಯಿರುತ್ತದೆ. ಪಾತಕದ ಘಟನೆಯೇ ಎದೆಗಾರಿಕೆಯ ಕೇಂದ್ರ ವಸ್ತು. ಆದರೆ ಬರವಣಿಗೆಯ ಮೂಲ ಸೆಳೆತವಿರುವುದು ಪಶ್ಚಾತ್ತಾಪ ಮತ್ತು ಕರುಣೆಯ ಕಡೆಗೆ. ಆಂತರ್ಯವನ್ನು ಬಿಚ್ಚಿಡುವ ಹಂಬಲವೇ ಇದರ ಜೀವಾಳ. ಘಟನಾವಳಿಯ ವಿವರಗಳು ಇಲ್ಲಿ ಮಂಡಿತವಾಗಿರುವುದು ರೋಚಕತೆಯನ್ನು ನಿರೂಪಿಸಲಿಕ್ಕಾಗಿ ಅಲ್ಲ. ಬದಲಾಗಿ ಆಯಾ ಪಾತ್ರಗಳ ಅಂತರಾಳದ ತುಮುಲ ಹಾಗೂ ಒಳತೋಟಿಯನ್ನು ಬಿಂಬಿಸಲಿಕ್ಕಾಗಿ. ಪಾತಕಿಗಳ ಆಳದಲ್ಲಿ ಅಂತರ್ಜಲದಂತೆ ನೆಲೆಗೊಂಡಿರುವ ಪ್ರೀತಿ, ಸ್ನೇಹ, ವಿಶ್ವಾಸ ಹಾಗೂ ವಿಶ್ವಾಸಘಾತಕತನ ಇವುಗಳನ್ನು ಅತ್ಯಂತ ಮಾನವೀಯವಾಗಿ ಎದುರಿಗಿಡುವ ಎದೆಗಾರಿಕೆಯ ಕಥನ ಇತರ ಭೂಗತ ಸಂಬಂಧೀ ಬರಹಗಳಿಗಿಂತ ಭಿನ್ನವಾಗಿ ಹೆಚ್ಚುಗ್ಗಾರಿಕೆಗಳಿಸಿಕೊಳ್ಳುತ್ತದೆ. ಅಗ್ನಿ ಶ್ರೀಧರ್ ರವರು ತಡವಾಗಿ ಬರೆಯಲು ಪ್ರಾರಂಭಿಸಿದರಾದರೂ ತಡವಿಲ್ಲದಂತೆ ಬರವಣಿಗೆಯ ಹದವನ್ನು ಕೈಗೂಡಿಸಿಕೊಂಡಿದ್ದಾರೆ ಎಂಬುದಕ್ಕೆ ಎದೆಗಾರಿಕೆ ಒಂದು ಸಾಕ್ಷಿಯಾಗಿ ನಿಂತಿದೆ. ಇದು ಸಾಧ್ಯವಾಗಿರುವುದು ಶ್ರೀಧರ್ ಅವರಿಗಿರುವ ಅನುಭವ ಹಾಗೂ ವಿಸ್ತಾರ ಓದಿನಿಂದಾಗಿ ಮಾತ್ರವಲ್ಲ ಅವರ ಜೀವನ ಪ್ರೀತಿ ಚಿಂತನೆಗಳ ಹಿನ್ನೆಲೆಯು ವಾಸ್ತವವಾದಿ ನಿರೂಪಣೆಯ ಎದೆಗಾರಿಕೆಯನ್ನು ಒಂದು ಸುಂದರ ಗದ್ಯ ಕಥನವಾಗಿಸುವಲ್ಲಿ ಯಶಸ್ವಿಯಾಗಿದೆ.:"[6]

ಒಟ್ಟಾರೆಯಾಗಿ ಹೇಳುವುದಾದರೆ ಕನ್ನಡದಲ್ಲಿ ಬಂದಿರುವ ಅತ್ಯುತ್ತಮ ಪ್ರೇಮ ಕಥೆಗಳ ಪೈಕಿ ಎದೆಗಾರಿಕೆ ಶ್ರೇಷ್ಟ ಪ್ರೇಮ ಕಥೆಯೆಂದೂ ಹೇಳಬಹುದು. ಏಕೆಂದರೆ ಕಥಾನಾಯಕ ಅಪರಾಧಿ ಪ್ರಪಂಚದವನಾದರೂ ತನ್ನ ಪ್ರೀತಿಯ ವಿಚಾರದಲ್ಲಿ ಪ್ರಾಮಾಣಿಕವಾಗಿದ್ದಾನೆ. ತನ್ನ ಸಾವಿನ ಸುದ್ದಿಯನ್ನು ತನ್ನ ಗೆಳತಿಗೆ ತಿಳಿಸಬಾರದೆಂದು ಶ್ರೀಧರ್ ರವರನ್ನು ಬೇಡಿಕೊಳ್ಳುತ್ತಾನೆ. ಎದೆಗಾರಿಕೆ ದುರಂತ ಪ್ರೇಮ ಕಥೆಯೂ ಹೌದು. ಅದರ ಅಂತ್ಯ ಓದುಗರನ್ನು ದುಃಖದ ಕಡಲಲ್ಲಿ ಮುಳುಗಿಸುತ್ತದೆ. ಎದೆಗಾರಿಕೆ ಕಾದಂಬರಿ ಅದೇ ಹೆಸರಿನಲ್ಲಿ ಸಿನಿಮಾವಾದಾಗ ಶ್ರೀಧರ್ ರವರ ಪಾತ್ರವನ್ನು

ಅತುಲ್ ಕುಲಕರ್ಣಿಯವರು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಎದೆಗಾರಿಕೆ ಕಾದಂಬರಿ ಅದೇ ಹೆಸರಿನಲ್ಲಿ ಸಿನಿಮಾವಾದುದರ ಬಗ್ಗೆ ಸಿನಿಮಾದ ಬಗ್ಗೆ ಒಂದೆರಡು ಮಾತುಗಳನ್ನಾಡಲೇಬೇಕು. ಸಿನಿಮಾದ ಹೀರೋ ಸೋನನ ಪಾತ್ರ ನಿರ್ವಹಿಸಿದ್ದು ಆದಿತ್ಯ ಅವರೇ ಆದರೂ ಸಹ ಸಿನಿಮಾದ ನಿಜವಾದ ಹೀರೋ ಶ್ರೀಧರ್ ಪಾತ್ರ ನಿರ್ವಹಿಸಿದ್ದು ಅತುಲ್ ಕುಲಕರ್ಣಿ. ಅವರ ಪಾತ್ರ ಮನೋಜ್ಞವಾಗಿದೆ. ಮುಂದುವರಿದು ತಾಂತ್ರಿಕ ಅಂಶಗಳ ಬಗ್ಗೆ ಹೇಳವುದಾದರೆ ಮುಂಬೈನ ಸುಂದರ ತಾಣಗಳನ್ನು ಸೆರೆಹಿಡಿಯುವಲ್ಲಿ ಛಾಯಾಗ್ರಾಹಕ ಬಿ. ರಾಕೇಶ್ ರವರ ಶ್ರಮ ಎದ್ದು ಕಾಣುತ್ತದೆ. ಸಾಧು ಕೋಕಿಲ ಅವರ ಹಿನ್ನೆಲೆ ಸಂಗೀತ ಕಾಡುತ್ತದೆ.

**ಕೊನೆ ಟಿಪ್ಪಣಿಗಳು:**

1. ಅಗ್ನಿ ಶ್ರೀಧರ್. (2013). ಎದೆಗಾರಿಕೆ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 10
2. ಅಗ್ನಿ ಶ್ರೀಧರ್. (2013). ಎದೆಗಾರಿಕೆ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 15
3. ಅಗ್ನಿ ಶ್ರೀಧರ್. (2013). ಎದೆಗಾರಿಕೆ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 48
4. ಅಗ್ನಿ ಶ್ರೀಧರ್. (2013). ಎದೆಗಾರಿಕೆ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 47
5. ಅಗ್ನಿ ಶ್ರೀಧರ್. (2013). ಎದೆಗಾರಿಕೆ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 48
6. ಅಗ್ನಿ ಶ್ರೀಧರ್. (2013). ಎದೆಗಾರಿಕೆ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 73 (ಬೆನ್ನುಡಿ)

**ಆಕರ ಗ್ರಂಥ:**

1. ಅಗ್ನಿ ಶ್ರೀಧರ್. (2013). ಎದೆಗಾರಿಕೆ. ಅಂಕಿತ ಪುಸ್ತಕ. ಬೆಂಗಳೂರು.